(ಉ) ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸಂಪೂರ್ಣವಾಗಿ ಔಷಧ ಸರಬರಾಜು.

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಅಧ್ಯಕ್ಷರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಪ್ರತಿ ವರ್ಷ ಸರ್ಕಾರದಿಂದ ೩೦ ಸಾವಿರ ರೂ.ಗಳ ಮತ್ತು ಜಿಲ್ಲಾ ಪಂಚಾಯತಿಯಿಂದ ೨೦ ಸಾವಿರ ರೂ.ಗಳ ಔಷಧಗಳನ್ನು ಸರಬರಾಜು ಮಾಡಲಾಗುತ್ತದೆ. ಆದರೆ ಸರ್ಕಾರದಿಂದ ಕೊಡುವಂಥ ಔಷಧಗಳನ್ನು ಸಮಯಕ್ಕೆ ಸರಿಯಾಗಿ ಸರಬರಾಜು ಮಾಡುವುದಿಲ್ಲ. ಕಳೆದ ವರ್ಷ ಕೊಡಬೇಕಾಗಿದ್ದಂಥ ಔಷಧಗಳನ್ನು ಇವೊತ್ತಿನವರೆಗೂ ಕೊಟ್ಟಿಲ್ಲ. ಈ ರೀತಿಯಾಗಿ ಸಮಯಕ್ಕೆ ಸರಿಯಾಗಿ ಔಷಧಗಳನ್ನು ಕೊಡದಿದ್ದರೆ ಅಲ್ಲಿರತಕ್ಕಂಥ ರೋಗಿಗಳ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಅರಿಯಬೇಕು. ಇಷ್ಟು ಮಾತ್ರವಲ್ಲದೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿರತಕ್ಕಂಥ ವೈದ್ಯರುಗಳು ಯಾವ ಔಷಧಗಳನ್ನು ಕೇಳಿರುತ್ತಾರೋ ಅದನ್ನು ಕೊಡದೆ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೂ ಸಮಾನವಾದಂಥ ಔಷಧಗಳನ್ನು ಹಂಚಿಬಿಡುತ್ತಾರೆ. ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಅವಶ್ಯಕತೆ ಇರುವ ಔಷಧಗಳನ್ನು ಸಮಯಕ್ಕೆ ಸರಿಯಾಗಿ ಸರಬರಾಜು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಪ್ರತಿ ವರ್ಷ ೫೦ ಸಾವಿರ ಹಾಗೂ ೩೦ ಸಾವಿರ ರೂ.ಗಳ ಔಷಧಗಳನ್ನು ಕ್ರಮವಾಗಿ ಸರ್ಕಾರ ಕೊಡುತ್ತಿದೆ. ಈಗ ಹೊಸದಾಗಿ ಔಷಧ ನೀತಿ ಜಾರಿಗೆ ಬಂದಿರುವುದರಿಂದ ವಿಶ್ವ ಆರೋಗ್ಯ ಸಂಸ್ಥೆಯ ಮಾರ್ಗಸೂಚಿಗನುಗುಣವಾಗಿ ಆಸ್ಪತ್ರೆಗೆ ಬೇಕಾದಂಥ ಅಗತ್ಯ ಔಷಧಗಳನ್ನು ಮತ್ತು ಜೀವಸಂರಕ್ಷಕ ಔಷಧಗಳನ್ನು ಸರಬರಾಜು ಮಾಡುವುದಕ್ಕಾಗಿ ಒಂದು ವರ್ಷಕ್ಕಾಗಿ ಈಗಾಗಲೇ ಔಷಧ ನೀತಿ ಜಾರಿಗೆ ಬಂದಿದೆ. ಹಿಂದೆ ಈ ನೀತಿ ಇಲ್ಲದ್ದರಿಂದ ಅನಾನುಕೂಲವಾಗಿತ್ತು. ಸ್ವಾತಂತ್ರ್ಯಾನಂತರ ಪ್ರಥಮವಾಗಿ ವಿಶ್ವ ಆರೋಗ್ಯ ಸಂಸ್ಥೆಯ ಮಾರ್ಗಸೂಚಿಗಳಿಗನುಗುಣವಾಗಿ ಆರೋಗ್ಯ ನೀತಿಯನ್ನು ನಮ್ಮ ದೇಶದಲ್ಲಿ ಜಾರಿಗೆ ತರಲಾಗಿದೆ. ಆದುದರಿಂದ ಇನ್ನು ಮುಂದೆ ಶೇಕಡ ೬೦ರಷ್ಟು ಜಿಲ್ಲಾ ಪಂಚಾಯತ್ ಮೂಲಕ ಮತ್ತು ಶೇಕಡ ೪೦ರಷ್ಟು ಔಷಧಗಳನ್ನು ಸರ್ಕಾರಿ ಮೆಡಿಕಲ್ ಸ್ಟೋರ್ಸ್ ಮುಖಾಂತರ ಸರ್ಕಾರಿ ಆಸ್ಪತ್ರೆಗಳಿಗೆ ಅಗತ್ಯವಾಗಿ ಔಷಧಗಳನ್ನು ಸರಬರಾಜು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

(ಊ) ಶ್ರೀರಂಗಪಟ್ಟಣ ತಾಲ್ಲೂಕಿನ ಬಲಮುರಿ ಫಾಲ್ಸ್ ರಸ್ತೆ ದುರಸ್ತಿ

ಅಧ್ಯಕ್ಷರು : ಶ್ರೀರಂಗಪಟ್ಟಣ ಶಾಸಕಿಯವರಾದ ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡರು ನನ್ನ ಅನುಮತಿ ಪಡೆದು ಸದನದಲ್ಲಿ ಗೈರುಹಾಜರಾಗಿದ್ದಾರೆ. ಅವರಿಗೆ ಸಂಬಂಧಪಟ್ಟಂತೆ ಒಂದು ವಿಷಯ ಪ್ರಸ್ತಾವಿದೆ. ಏನೆಂದರೆ ಶ್ರೀರಂಗಪಟ್ಟಣ ತಾಲ್ಲೂಕಿನ ಬೆಳಗೊಳ ಹೋಬಳಿಯಲ್ಲಿ ಬಲಮುರಿ ಫಾಲ್ಸ್ ದೊಡ್ಡ ಪ್ರವಾಸಿ ಕೇಂದ್ರವಾಗಿದ್ದು ಇಲ್ಲಿಗೆ ರಾಷ್ಟ್ರಮಟ್ಟದಾದ್ಯಂತ ಇರುವ ಎಲ್ಲಾ ಪ್ರವಾಸಿಗರು ಬರುತ್ತಾರೆ. ಆದರೆ ಇಲ್ಲಿಗೆ ಸುಮಾರು ಮೂರು ಕಿ.ಮೀ. ರಸ್ತೆಯನ್ನು ಏನು ಮಾಡಲಾಗಿದೆ ಅದನು ಬಹಳ ಹಾಳಾಗಿ ಹೋಗಿದೆ. ಈ ರಸ್ತೆ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಅಂದಾಜುಪಟ್ಟಿಯನ್ನು ಕೂಡ ಶಾಸಕಿಯವರು ಲಗತ್ತಿಸಿ ಕಳುಹಿಸಿದ್ದಾರೆ. ಸಾವಿರಾರು ಪ್ರವಾಸಿಗರು ಈ ಪ್ರವಾಸ ತಾಣಕ್ಕೆ ಬರುವ ಹಿನ್ನೆಲೆಯಲ್ಲಿ ಈ ರಸ್ತೆ ನಿರ್ಮಾಣ ಕಾರ್ಯವನ್ನು ಬೇಗನೇ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿದ್ದಾರೆ.

ಶ್ರೀ ಉಮೇಶ್ ವಿ. ಕತ್ತಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ರಸ್ತೆ ಜಿಲ್ಲಾ ಪಂಚಾಯತಿ ವ್ಯಾಪ್ತಿಗೆ ಬರುವುದರಿಂದ ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗೆ ಆದೇಶ ಕೊಡುವ ಮೂಲಕ ಕೆಲಸವನ್ನು ಮಾಡಿಸುವುದಾಗಿ ಈ ಸಂದರ್ಭದಲ್ಲಿ ಹೇಳುತ್ತೇನೆ.

(ಖ) ಅಂಗನವಾಡಿ ಶಾಲೆಯ ಮಕ್ಕಳಿಗೆ ಉಪಹಾರ ತಯಾರಿಸುವ ಉರುವಲು ವೆಚ್ಚವನ್ನು ಭರಿಸುವ ಬಗ್ಗೆ.

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಅಧ್ಯಕ್ಷರೆ, ಈಗಾಗಲೇ ಅಂಗನವಾಡಿ ಕಾರ್ಯಕರ್ತೆಯರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಅಂಗನವಾಡಿ ಸಹಾಯಕಿಯರಿಗೆ ಈಗ ಕೊಡುತ್ತಿರುವ ಸಂಬಳವೇ ಕಡಿಮೆ ಇದೆ. ಇದೂ ಅಲ್ಲದೇ ಅಂಗನವಾಡಿ ಶಾಲೆಯ ಮಕ್ಕಳಿಗೆ ಕೊಡುವ ಉಪಹಾರ ತಯಾರಿಸುವುದಕ್ಕೆ ಉರುವಲು ವೆಚ್ಚವನ್ನು ಇವರುಗಳೇ ಭರಿಸಬೇಕಾಗಿದೆ. ಕೆಲವು ಕಡೆ ಜಿಲ್ಲಾ ಪಂಚಾಯತಿಯವರೇ ಆ ವೆಚ್ಚವನ್ನು ಭರಿಸಬೇಕೆಂದು ಇದೆ. ಆದರೆ ಅವರು ಕೆಲವು ಕಡೆ ಕೊಡುತ್ತಿಲ್ಲವೆನ್ನುವ ತಕರಾರಿದೆ. ನಗರ ಪ್ರದೇಶಗಳ ಅಂಗನವಾಡಿ ಕಾರ್ಯಕರ್ತೆಯರಂತೂ ತಮಗೆ ಬರುತ್ತಿರುವ ಸಂಬಳವೇ ಕಡಿಮೆ ಇರುವುದರಿಂದ ಉರುವಲು ವೆಚ್ಚವನ್ನು ಕೂಡ ತಾವೇ ಭರಿಸಿಕೊಳ್ಳಲು ಸಾಧ್ಯವಿಲ್ಲವೆಂದು ಹೇಳುವುದರಿಂದ ಮಕ್ಕಳಿಗೆ ಪೌಷ್ಟಿಕ ಆಹಾರ ತಪ್ಪಿಹೋಗುವ ಭಯವಿದೆ. ಆದುದರಿಂದ ಉರುವಲು ವೆಚ್ಚ ಕೊಡುವುದಕ್ಕೆ ಸಂಬಂಧಪಟ್ಟಂತೆ ಸ್ಪಷ್ಟ ನೀತಿಯನ್ನು ಅನುಸರಿಸಬೇಕು. ಆದುದರಿಂದ ಮಕ್ಕಳಿಗೆ ನೀವು ಸಿದ್ಧವಾದ ಆಹಾರವನ್ನು ಕೊಡುತ್ತೀರೋ, ಗ್ಯಾಸ್ ವ್ಯವಸ್ಥೆಯನ್ನೇನಾದರೂ ಮಾಡುತ್ತಿರೋ ಅಥವಾ ಉರುವಲು ವೆಚ್ಚವನ್ನು ಕೊಡುತ್ತೀರೋ, ಇವುಗಳಲ್ಲಿ ಯಾವುದೇ ಒಂದು ರೀತಿಯಲ್ಲಿ ವ್ಯವಸ್ಥೆ ಮಾಡಿ ಸಮಸ್ಯೆಯನ್ನು ಪರಿಹರಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀಮತಿ ವಿಮಲಾಬಾಯಿ ದೇಶಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ): ಮಾನ್ಯ ಅಧ್ಯಕ್ಷರೆ ಪ್ರತಿ ತಿಂಗಳಿಗೆ ೭೫-೦೦ ರೂ.ಗಳಂತೆ ಗ್ರಾಮ ಪಂಚಾಯತಿಯಿಂದ ಉರುವಲು ವೆಚ್ಚವೆಂದು ಮತ್ತು ಮಂಡಲ ಪಂಚಾಯತಿಯಿಂದ ಸೀಮೆ ಎಣ್ಣೆಯನ್ನು ಕೊಡಲಾಗುತ್ತಿದೆ. ಆದುದರಿಂದ ಅವರುಗಳು ಈ ಸೌಲಭ್ಯವನ್ನು ಪಡೆದು ಕೊಳ್ಳುತ್ತಿದ್ದಾರೆಂದು ಹೇಳಬಯಸುತ್ತೇನೆ.

ಶ್ರೀ ಕುಂಬ್ಳೆ ಸುಂದರರಾವ್ : ಸೀಮೆ ಎಣ್ಣೆಯನ್ನು ಕೊಡುತ್ತಿಲ್ಲವಾದ್ದರಿಂದ ಸಮಸ್ಯೆ ಉದ್ಭವವಾಗಿರುವುದು.

ಅಧ್ಯಕ್ಷರು : ಸೀಮೆ ಎಣ್ಣೆ ಕೊಡುವುದಕ್ಕೆ ಸ್ಪಷ್ಟವಾಗಿ ಆದೇಶ ಹೊರಡಿಸಿ ಸೀಮೆ ಎಣ್ಣೆಯನ್ನು ಅಂಗನವಾಡಿಗಳಿಗೆ ಒದಗಿಸಿ.

ಶ್ರೀಮತಿ ವಿಮಲಾಬಾಯಿ ದೇಶಮುಖ್ : ಖಚಿತವಾಗಿ ಇಂಥ ಕಡೆ ಕೊಟ್ಟಿಲ್ಲವೆಂದರೆ ಸೀಮೆ ಎಣ್ಣೆ ಕೊಡಿಸುವುದಕ್ಕೆ ವ್ಯವಸ್ಥೆ ಮಾಡಲಾಗುವುದು.